ದಿನಾಂಕಃ 05-02-2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀಸವಾಲು ಪ್ರತಿವಾದಿ ಪರ ವಕೀಲರಾದ ಶ್ರೀ. ಬಿ ಆರ್ ಎಸ್ ವಕೀಲರಿಂದ

ಮುನಿಶಾಮಿ ಎಂಬುವವರು ನಿಮ್ಮ ವಿರುದ್ದ ಎ ಸಿ ನ್ಯಾಯಾಲಯದಲ್ಲಿ ಆರ್ ಟಿ ಆರ್ ನಂ. 314/18-19 ರಂತೆ ಹಾಕಿರುತ್ತಾರೆ ಎಂದರೆ ಸುಳ್ಳು ಯಾವುದೇ ಅಪೀಲು ಇರುವುದಿಲ್ಲ. ಪ್ರತಿವಾದಿ ಏನು ತಕರಾರು ಹಾಕಿರುತ್ತಾರೆ ಅಂತ ಗೊತ್ತಿರುವುದಿಲ್ಲ. ಪ್ರತಿವಾದಿಯನ್ನು ನಾನು ನೋಡಿರುತ್ತೇನೆ. ನಮ್ಮ ಊರಿನಿಂದ 2-3 ಕಿ. ಮೀ, ದೂರದಲ್ಲಿ ಪ್ರತಿವಾದಿ ಇರುತ್ತಾರೆ. ಈ ದಾವೆಯನ್ನು ನಾನು ಹಾಕಿರುತ್ತೇನೆ. ನಲ್ಲಗುಟ್ಟಹಳ್ಳಿ ಸರ್ವೆ ನಂ.49/6 ಗೆ ಹಾಕಿರುತ್ತೇನೆ. ನಮ್ಮ ಊರಿನಿಂದ ದಾವಾ ಸ್ವತ್ತಿಗೆ 2 ರಿಂದ 3 ಕಿ.ಮೀ. ಆಗುತ್ತದೆ. ನನ್ನ ತಂದೆ ಹೆಸರು ಗಂಗುಲಪ್ಪ. ಎಷ್ಟು ಜನ ಅಣ್ಣ ತಮ್ಮಂದಿರು ಎಂದರೆ ನನ್ನ ತಂದೆ ಒಬ್ಬರೇ, ನಿಮ್ಮ ತಂದೆ ಏನು ಮಾಡುತ್ತಿದ್ದಾರೆ ಎಂದರೆ ನನ್ನ ತಂದೆ 2017 ರಲ್ಲಿ ತೀರಿಕೊಂಡಿರುತ್ತಾರೆ. ನನ್ನ ತಂದೆಯ ತಂದೆ ಹೆಸರು ಮುನಿಶಾಮಿ. ನೀವು ಹೇಳಿರುವ ಮುನಿಶಾಮಿ ಬದುಕಿರುತ್ತಾರಾ ಎಂದರೆ ಬದುಕಿರುತ್ತಾರೆ ನಮ್ಮ ತಾತ. ನಿಮ್ಮ ಹೆಸರಿಗೆ ಖಾತೆ ಬದಲಾವಣೆ ಆಗಬಹುದು ಅಂತ ಮುನಿಶಾಮಿ ಎಂಬ ಹೆಸರಿರುವವರು ಏನಾದರೂ ದಾಖಲೆ ಬರೆದುಕೊಟ್ಟಿರುತ್ತಾರಾ ಎಂದರೆ ನನಗೆ ಸಂಬಂಧ ಇರುವುದಿಲ್ಲ. ಜಮೀನು ಮಂಜೂರುದಾರ ಮುನಿಶಾಮಿಗೆ ನಿಮಗೆ ಸಂಬಂಧ ಇಲ್ಲ ಎಂದರೆ ಸಂಬಂಧ ಇಲ್ಲ. ದಾವಾ ಆಸ್ತಿ ನಿಮ್ಮ ತಂದೆಗೆ ಖಾತೆ ಇರುತ್ತದಾ ಎಂದರೆ ನನ್ನ ತಂದೆ ಹೆಸರಿಗೆ ಬಂದಿರುವುದಿಲ್ಲ ನನ್ನ ಹೆಸರಿಗೆ ಪವತಿ ವಾರಸು ಖಾತೆ ಮಾಡಿಸಿಕೊಂಡಿರುತ್ತೇನೆ. ಯಾವಾಗ ನಿಮ್ಮ ಹೆಸರಿಗೆ ಖಾತೆಯಾಗಿರುತ್ತದೆ ಎಂದರೆ 2017 ರಲ್ಲಿ. ನನ್ನ ತಾತ ತೀರಿಕೊಂಡಿರುತ್ತಾರೆ ಅಂತ ಹೇಳಿ ಖಾತೆ ಮಾಡಿಸಿಕೊಂಡಿರುತ್ತೇನೆ. ಮರಣ ಪತ್ರ ಮಾಣ ಪತ್ರ ಕೊಟ್ಟಿರುತ್ತೇನೆ ಖಾತೆದಾರರು ಯಾವಾಗ ಸತ್ತಿರುತ್ತಾರೆ ಅಂತ ದಿನಾಂಕ ಗೊತ್ತಿರುವುದಿಲ್ಲ. ಸಾಗುವಳಿ ಚೀಟಿಯಲ್ಲಿ ಚೆಕ್ಕುಬಂದಿ ಇರುವುದಿಲ್ಲ ಎಂದರೆ ಚೆಕ್ಕುಬಂದಿ ಇರುವುದಿಲ್ಲ. ಅಸಲು ಸಾಗುವಳಿ ಚೀಟಿಯ ಏನಾಗಿರುತ್ತದೆ ಎಂದರೆ ನ್ಯಾಯಾಲಯಕ್ಕೆ ಕೊಟ್ಟಿರುತ್ತೇನೆ. ಸಾಗುವಳಿ ಚೀಟಿ

ನೀವು ಸೃಷ್ಟಿ ಮಾಡಿಕೊಂಡಿದ್ದು ಸರ್ಕಾರದಿಂದ ಕೊಟ್ಟಿರುವುದಿಲ್ಲ ಎಂದರೆ ಸುಳ್ಳು ಸಾಗುವಳಿ ಚೀಟಿಯಲ್ಲಿ ಮುನಿಶಾಮಿ ರವರ ತಂದೆ ಹೆಸರು ಇಲ್ಲ ಎಂದರೆ ಸರಿಯಲ್ಲ. ಮುನಿಶಾಮಿ ಬಿನ್ ವೆಂಕಟಬೋವಿ ಅಂತ ಬರೆದಿದೆ. ನೀವು ನೀಡಿರುವ ಸಾಗುವಳಿ ಚೀಟಿಯಲ್ಲಿ ಸಬ್ ನಂಬರ್ ಇದೆಯಾ ಎಂದರೆ ನಾನು ಓದಿಲ್ಲ ಗೊತ್ತಿಲ್ಲ, ಪಹಣಿಯಲ್ಲಿ ಇದೆ ಎಂದು ನುಡಿಯುತ್ತಾರೆ. ಪಹಣಿ ಪತ್ರಿಕೆಯಲ್ಲಿ ನಿಪಿ-4 ಪಹಣಿಯಲ್ಲಿ ಇಂತಹವರಿಗೆ ಮಂಜೂರಾಗಿದೆ, ನಂತರ ಪವತಿ ವಾರಸುಯಾಗಿದೆ ಅಂತ ಬರೆದಿರುವುದಿಲ್ಲ ಎಂದರೆ ಪಹಣಿಯಲ್ಲಿ ಬಂದಿರುತ್ತದೆ.

ವೆಂಕಟಶಾಮಿ ಎಂಬ ವ್ಯಕ್ತಿ ಗೊತ್ತಿರುವುದಿಲ್ಲ ನನಗೂ ಅವರಿಗೂ ಸಂಬಂಧ ಇರುವುದಿಲ್ಲ. ವೆಂಕಟಶಾಮಿ ರವರಿಗೆ ನಿಮಗೆ ಸಂಬಂಧ ಇದೆಯಾ ಎಂದರೆ ವೆಂಕಟಶಾಮಿ ವೆಂಕಟಬೋವಿ ಅಂತ ಕರೆಯುತ್ತಿದ್ದರು. ವೆಂಕಟಶಾಮಿ ವೆಂಕಟಬೋವಿ ಅಂತ ಕರೆಯುತ್ತಿದ್ದುದ್ದಕ್ಕೆ ದಾಖಲೆ ಇದೆಯಾ ಎಂದರೆ ದಾಖಲೆ ಇರುವುದಿಲ್ಲ. ನಿಮ್ಮ ವಕೀಲರಿಗೆ ದಾವೆ ಹಾಕಿಂ ನಂತರ ತಕರಾರು ಹಾಕುವಾಗ ವೆಂಕಟಶಾಮಿ ವೆಂಕಟಬೋವಿ ಅಂತ ಕರೆಯುತ್ತಿದ್ದರು ಅಂತ ಹೇಳಿದ್ದೀರಾ ಎಂದರೆ ಇಲ್ಲ.

ಗಂಗುಲಪ್ಪನವರ ತಂದೆ ಮುನಿಶಾಮಿ ಅಂತ ತೋರಿಸಲು ದಾಖಲೆ ಇದೆಯಾ ಎಂದರೆ ಯಾವುದೇ ದಾಖಲೆ ಇರುವುದಿಲ್ಲ. ಆಗಿನ ಕಾದಲ್ಲಿ ಆಧಾರ್ ಕಾರ್ಡ್, ಪಾನ್ ಕಾರ್ಡಿ ಇರುವುದಿಲ್ಲ. 2017 ರಲ್ಲಿ ನನ್ನ ಹೆಸರಿಗೆ ಖಾತೆ ಆಗಿರುತ್ತದೆ. ಯಾವುಂದೇ ವ್ಯಕ್ತಿಗೆ ಜಮೀನು ಮಂಜೂರು ಮಾಡಬೇಕಾದರೆ ಅವರ ಮನೆಯಲ್ಲಿ ಎಷ್ಟು ಜನ ಇದ್ದಾರೆ, ಹಸು ಕುರಿ ಎಷ್ಟು ಇದೆ ಅಂತ ನೋಡಿ ಕೊಡುತ್ತಾರೆ ಎಂದರೆ ಸರಿ. ನೀವು ದಾವೆಯಲ್ಲಿ ನೀಡಿರುವ ಚೆಕ್ಕುಬಂದಿ ಹೇಳಲಾಗುತ್ತದಾ ಎಂದರೆ ಹೇಳುತ್ತೇನೆ ಪೂರ್ವಕ್ಕೆ ಉತ್ತರ ಚೌಡಪ್ಪ, ಪಶ್ಚಿಮಕ್ಕೆ ಲಕ್ಷ್ಮೀದೇವಮ್ಮ, ಉತ್ತರಕ್ಕೆ ಫಕೀರಪ್ಪ. ದಕ್ಷಿಣಕ್ಕೆ ನೇಗಲಹಳ್ಳಿ ಗಡಿ, ನಂತರ ಸರ್ವೆ ನಂ.10 ನನ್ನ ತಾತ ಮುನಿಶಾಮಿ ರವರ ಹೆಸರಿನಲ್ಲಿ ಇದ್ದು ಅದನ್ನು ನಾನು ಖಾತೆ ಮಾಡಿಸಿಕೊಂಡಿರುತ್ತೇನೆ. ಆ ಜಮೀನು ನಿಮ್ಮ ತಾತನಿಗೆ ಹೇಗೆ ಬಂತು ಎಂದರೆ ಸಾಗುವಳಿ ಮಾಡಿ ಬಂದಿರುತ್ತದೆ. ಪ್ರತಿವಾದಿಗೆ ನಲ್ಲಗುಟ್ಟಹಳ್ಳಿಯಲ್ಲಿ ಜಮೀನು ಇರುವ ಬಗ್ಗೆ ನನಗೆ ಗೊತ್ತಿಲ್ಲ. ನಿಮ್ಮ ಮೇಲೆ ವೆಂಕಟೇಶಪ್ಪ ನವರು 171/21 ರಂತೆ ದಾವೆ ಹಾಕಿರುವ ವಿಚಾರ ಗೊತ್ತ ಎಂದರೆ ಗೊತ್ತು. ಆ ದಾವೆಯಲ್ಲಿ ಯಾವ ಸರ್ವೆ

ನಂಬರ್  ಮೇಲೆ ದಾವೆ ಹಾಕಿರುತ್ತಾರೆ ಎಂದು ಗೊತ್ತಿರುವುದಿಲ್ಲ. ಆ ಜಮೀನಿಗೆ ಚೆಕ್ಕುಬಂದಿ ಹಾಕಿರುತ್ತಾರೆ ಅಂತ ಗೊತ್ತಿರುವುದಿಲ್ಲ. ಸರ್ವೆ ನಂ.49/ಪಿ 19 ರ 2 ಎಕರೆ 38 ಗುಂಟೆ  ಪೂರ್ವಕ್ಕೆ ಚೌಡಪ್ಪ, ಪಶ್ಚಿಮಕ್ಕೆ ಲಕ್ಷ್ಮಿದೇವಮ್ಮ, ಆ ಚೆಕ್ಕುಬಂದಿಯಲ್ಲಿ ನಿಮ್ಮ ಜಮೀನು ಬರುವುದಿಲ್ಲ ಎಂದರೆ ಅದೇ ಚೆಕ್ಕುಬಂದಿಯಲ್ಲಿ ನನ್ನ ಜಮೀನು ಬರುವುದು, ನನ್ನ ಜಮೀನಿನ ಉತ್ತರಕ್ಕೆ -ಫಕೀರಪ್ಪ ಇದ್ದು ವೆಂಕಟೇಶಪ್ಪ ಇಲ್ಲ.  ನೀವು ಹೇಳಿರುವ ಸರ್ವೆ ನಂ.10 ನಿಮಗೆ ಮತ್ತು ಮುನಿಶಾಮಿಗೆ ಸಂಬಧ ಇರುವುದಿಲ್ಲ ಎಂದರೆ ಸರಿಯಲ್ಲ. ಪೂರ್ವಕ್ಕೆ ಚೌಡಪ್ಪ, ಪಶ್ಚಿಮಕ್ಕೆ ಲಕ್ಷ್ಮಿದೇವಮ್ಮ, ಉತ್ತರಕ್ಕೆ ಫಕೀರಪ್ಪ ದಕ್ಷಿಣಕ್ಕೆ  ನೇಗಲಪಲ್ಲಿ ಗಡಿ, ಆ ಜಮೀನಿಗೆ ನಿಮಗೆ ಸಂಬಂಧ ಇರುವುದಿಲ್ಲ ಎಂದರೆ ಅದೇ ಸಂಬಂಧ ಇರುವುದು.

ಸರ್ವೆ ನಂ. 49/ಪಿ19 ಮಲ್ಲಪ್ಪ ಬಿನ್ ಚಿನ್ನಬೋವಿ ಎಂಬುವವರ ಹೆಸರಿನಲ್ಲಿ ಖಾತೆ ಇದೆ ಎಂದರೆ ಸುಳ್ಳು, ಸ್ವಾಧೀನ ಪ್ರತಿವಾದಿಗಳು  ಇರುತ್ತಾರೆ ಎಂದರೆ ಸರಿಯಲ್ಲ ನಾವೇ 1961-62 ರಿಂದ ನಾವೇ ಇದ್ದೇವೆ.  ಪೂರ್ವಕ್ಕೆ ಚೌಡಪ್ಪ, ಪಶ್ಚಿಮಕ್ಕೆ ಲಕ್ಷ್ಮಿದೇವಮ್ಮ,ಉತ್ತರಕ್ಕೆ -ಫಕೀರಪ್ಪ ದಕ್ಷಿಣಕ್ಕೆ  ನೇಗಲಪಲ್ಲಿ ಗಡಿ, ಸಾಗುವಳಿ ಚೀಟಿಯಲ್ಲಿ ಚೆಕ್ಕು ಬಂದಿ ಬರೆದು 2 ಎಕರೆ 38 ಗುಂಟೆ ಜಮೀನನ್ನು ಮಲ್ಲಪ್ಪನ ಹೆಸರಿಗೆ ಸಾಗುವಳಿ ಚೀಟಿ ಬರೆದಿರುತ್ತಾರೆ ಎಂದರೆ ಗೊತ್ತಿಲ್ಲ.  ಸರ್ವೆ ನಂ. 49/6 ಜಮೀನಿಗೆ ನಿಮಗೆ ಸಂಬಂಧ ಇರುವುದಿಲ್ಲ ಎಂದರೆ ಸುಳ್ಳು,  ಆ ಜಮೀನಿನಲ್ಲಿ ಮುನಿಶಾಮಿ ಎಂಬುವವರು ಬೇರೆ ಇರುತ್ತಾರೆ ಅವರು ಬದುಕಿರುತ್ತಾರೆ ಮತ್ತು ನಿಮ್ಮ ಮೇಲೆ ದಾವೆ ಹಾಕಿರುತ್ತಾರೆ ಎಂದರೆ ಸುಳ್ಳು, ನೀವು ತಪ್ಪು ವಂಶ ವೃಕ್ಷವನ್ನು ನೀಡಿರುತ್ತೀರಿ ಎಂದರೆ ಸುಳ್ಳು,  ನಿಪಿ-11 ವಂಶವೃಕ್ಷದಲ್ಲಿ ಗಂಗುಲಪ್ಪನವರ ತಂದೆ  ಮುನಿಶಾಮಿ ಅಂತ ಇರುವುದಿಲ್ಲ ಎಂದರೆ ಸರಿಯಲ್ಲ. ಗಂಗುಲಪ್ಪ ಜೀವಂತ ಇದ್ದಾರೆ ಅಂತ ಅದರಲ್ಲಿ ಇಲ್ಲ ಎಂದರೆ ಸುಳ್ಳು . ನನ್ನ ತಾಯಿ ಹೆಸರು ಸುಬ್ಬಮ್ಮ. ನನ್ನ ತಂದೆ ಗಂಗುಲಪ್ಪನವರ ತಾಯಿ ಹೆಸರು ವೆಂಕಟಮ್ಮ. ಗಂಗುಲಪ್ಪ ನವರ ತಾಯಿ ಹೆಸರು ಸುಬ್ಬಮ್ಮ ಅಲ್ಲ.

ಮುಂದುವರಿದ ಪಾಟೀಸವಾಲಿಗೆ ಸಮಯ ಕೋರಿದ್ದು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ,

ಪ್ರಧಾನ ಸಿ.ನ್ಯಾ ಮತ್ತು ಜೆ.ಎಂ.ಎಫ್.ಸಿ.,
ಚಿಂತಾಮಣಿ.